ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಮತ್ತು ಆ) ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಬಾಗೇವಾಡಿ ಗ್ರಾಮದಲ್ಲಿ 33 ಕೆ ವಿ ಸ್ಟೇಷನ್ ಮಂಜೂರಾಗಿರುವುದಿಲ್ಲ ಆದರೆ ಇದೇ ತಾಲ್ಲೂಕಿನ ಡೋಣಿ ಗ್ರಾಮದಲ್ಲಿ 33 ಕೆ ವಿ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಜನವರಿ 99ರಲ್ಲಿ ಅನುಮೋದನೆ ನೀಡಿತ್ತು ಆದರೆ ಇದೇ ತಾಲ್ಲೂಕಿನ ಡಂಬಳ ಗ್ರಾಮದಲ್ಲಿ ಒಂದು 1x10 ಎಂ ವಿ ಎ 110/11 ಕೆ ವಿ 1x10 ಎಂ ವಿ ಎ 110/33 ಕೆ ವಿ ವಿದ್ಯುತ್ ಸಬ್ – ಸ್ಟೇಷನ್‌ನ್ನು ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ ಡೋಣಿ ಗ್ರಾಮವು ಡಂಬಳದಿಂದ ಕೇವಲ 6 ಕಿ ಮೀ ದೂರದಲ್ಲಿದ್ದು, ಡಂಬಳದಲ್ಲಿ ಸಬ್–ಸ್ಟೇಷನ್ ಚಾಲನೆಗೊಂಡ ನಂತರ ಡೋಣಿ ಗ್ರಾಮದ ಸುತ್ತ – ಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದರಿಂದ, ಡೋಣಿ ಗ್ರಾಮದಲ್ಲಿ 33 ಕೆ ವಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಯನ್ನು ಈಗ ಕೈ ಬಿಡಲಾಗಿದೆ

ಮುಂಡರಗಿ ಹಾಗೂ ಡಂಬಳದಲ್ಲಿ 110 ಕೆ ವಿ ಸ್ಟೇಷನ್ ಪ್ರಾರಂಭಿಸುವ ಬಗ್ಗೆ

63 (282) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ಮುಂಡರಗಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆಯ ಮುಂಡರಗಿ ಹಾಗೂ ಡಂಬಳದಲ್ಲಿ 110 ಕೆ ವಿ ಸ್ಟೇಷನ್‌ಗೆ ಅಡಿಗಲ್ಲು ಹಾಕಿ ಎಷ್ಟು ವರ್ಷಗಳಾದವು

ಆ) ಸದರಿ ಸಬ್–ಸ್ಟೇಷನ್‌ಗಳು ಎಂದಿನಿಂದ ಪ್ರಾರಂಭವಾಗುತ್ತವೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗದಗ ಜಿಲ್ಲೆಯಿ ಮುಂಡರಗಿ ಮತ್ತು ಡಂಬಳಗಳಲ್ಲಿ 110 ಕೆ ವಿ ವಿದ್ಯುತ್ ಸಬ್ – ಸ್ಟೇಷನ್‌ಗಳ ಸ್ಥಾಪನೆಗೆ ಅನುಕ್ರಮವಾಗಿ ಮೇ 1998 ಮತ್ತು ಏಪ್ರಿಲ್ 1999 ರಲ್ಲಿ ಅಡಿಗಲ್ಲನ್ನು ಹಾಕಲಾಗಿರುತ್ತದೆ

ಆ) ಸದರಿ ವಿದ್ಯುತ್ ಸಬ್–ಸ್ಟೇಷನ್‌ಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿದ್ದು, ಫೆಬ್ರವರಿ 2004ರ ಅಂತ್ಯದೊಳಗೆ ನಿರ್ಮಾಣ ಕಾರ್ಯಗಳು ಪೂರ್ಣಗೊಂಡು ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇರುತ್ತದೆ

ಬೆಳ್ತಂಗಡಿ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ

64 (197) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ವ್ಯಾಪ್ತಿಯಲ್ಲಿ ಇದುವರೆಗೆ ಎಷ್ಟು ಸಣ್ಣ ನೀರಾವರಿ ಇಲಾಖೆಯ ವೆಂಟೆಡ್ ಡ್ಯಾಮ್ (ಕಿಂಡಿ ಅಣೆಕಟ್ಟು) ಗಳನ್ನು ನಿರ್ಮಿಸಲಾಗಿದೆ ವಿವರ ನೀಡುವುದು

ಆ) ಇವುಗಳ ನಿರ್ವಹಣೆಗೆ ಹಾಗೂ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತದಯೇ ಇದಕ್ಕಾಗಿ ಕಳೆದ 4 ವರ್ಷಗಳಿಂದ ಖರ್ಚು ಮಾಡಿರುವ ಮೊತ್ತವೆಷ್ಟು ಮತ್ತು ಯಾವ ಯಾವ ಕಿಂಡಿ ಅಣೆಕಟ್ಟುಗಳ ದುರಸ್ತಿಗಾಗಿ ವೆಚ್ಚ ಮಾಡಲಾಗಿದೆ

ಇ) ಅದೇ ರೀತಿ ಗಿಳಿ ಕಾಪು ಎಂಬಲ್ಲಿ ಪಲ್ಗುಣಿ ನದಿಗೆ ವೆಂಟೆಡ್ ಡ್ಯಾಮ್ ಬ್ಯಾರೇಜ್ ಸಮೇತ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ